

‘ಗಿಡ ಕೊಡಿ ಅಂಕಲ್! ನಮ್ಮ ಸ್ಕೂಲಲ್ಲಿ ತುಂಬಾ ಜಾಗ ಇದೆ. ನಾನೇ ನೆಡ್ತೀನಿ. ನೀರಾಕಿ ಉಳ್ಸಿ ಬೆಳಸ್ತೀನಿ. ಆಮೇಲೆ ನನ್ನ ಜೂನಿಯರ್ಸ್ ಇರ್ತರಲ್ಲಾ, ತಮ್ಮ ತಂಗೀರು - ಅವ್ರು ನೀರಾಕಿ ಉಳ್ಸಿ ಬೆಳ್ಸತಾರೆ. ಆಮೇಲೆ ಅವ್ರ ತಮ್ಮ ತಂಗಿ ಇರ್ತಾರಲ್ಲ ಅವ್ರು ನೀರಾಕಿ ಉಳ್ಸಿ ಬೆಳಸ್ತಾರೆ. ನೀವೇನೂ ಯೋಚನೆ ಮಾಡ್ಬೇಡಿ, ಗಿಡ ಕೊಡಿ’. ಮಗಳ ಮಾತನ್ನು ಕೇಳಿ ನನಗೆ ಆಶ್ಚರ್ಯವಾಯಿತು.

‘ಆಲದ ಮರವೇ ಆಲದ ಮರವೇ, ರೆಕ್ಕೆ ಮುರಿದ ಹಕ್ಕಿಗೊಂದು ನೆಲೆಯ ಕೊಡುವೆಯಾ’

ಇದು ನಾನು ಎಂಟನೇ ತರಗತಿಯಲ್ಲಿದ್ದಾಗ ಶಾಲಾ ವಾರ್ಷಿಕೋತ್ಸವಕ್ಕೆಂದೇ ಮಾಡಿದ ನೃತ್ಯರೂಪಕ. ನಾವು ಹತ್ತು ಮಂದಿ ವಿದ್ಯಾರ್ಥಿಗಳು ಹತ್ತು ಹಕ್ಕಿಗಳಾಗಿರುತ್ತೇವೆ. ಹನ್ನೊಂದನೆಯ ವಿದ್ಯಾರ್ಥಿ ಆಲದ ಮರವಾಗಿರುತ್ತಾನೆ. ಪರದೆಯ ಹಿಂದೆ ನಿಂತವರು ಹಿಮ್ಮೇಳ, ಸ್ವರ, ಲಯ, ಮಾತು–ಹಾಡುಗಳಿಗೆ ಧ್ವನಿಯಾಗುತ್ತಾರೆ. ನಾವುಗಳು ಒಂದೊಂದೇ ಹಕ್ಕಿ, ಒಂದು ಕೈ ಮಡಿಸಿಕೊಂಡು ಮತ್ತೊಂದು ಕೈಯಲ್ಲಿ ಹಾರಿದಂತೆ ನಟಿಸುತ್ತಾ ಲಘುವಾಗಿ ಕುಣಿಯುತ್ತಾ ಆಲದ ಮರವನ್ನು ಸಮೀಪಿಸಿ, ‘ಆಲದ ಮರವೇ ಆಲದ ಮರವೇ ರೆಕ್ಕೆ ಮುರಿದ ಹಕ್ಕಿಗೊಂದು ನೆಲೆಯ ಕೊಡುವೆಯಾ?’ ಎಂದು ಕೇಳಿ, ಅದರ ಉತ್ತರಕ್ಕಾಗಿ ಕಾಯುತ್ತಾ ಭಯ ಭಕ್ತಿಯಿಂದ ನಿಲ್ಲಬೇಕು. ಆಗ ವೇದಿಕೆಯ ಮೇಲೆ ಮತ್ತು ಮುಂಭಾಗದಲ್ಲಿ ಎಲ್ಲಿಲ್ಲದ ಮೌನ. ಮುಂದೇನು ಎಂಬ ಪ್ರಶ್ನೆ ಪ್ರೇಕ್ಷಕರಿಗೆ. ಒಂದು ನಿಮಿಷ ಕಳೆದ ನಂತರ ಹಿಮ್ಮೇಳದವರು ‘ಲಾಲಲಾ ಲಾಲಲಾ ಲಾಲಲಾ’ ಎಂದು ಲಲಾಪಿಸಿ, ಒಂದೆರಡು ಬಾರಿ ಚಿಲಿಪಿಲಿ ಸದ್ದು ಮಾಡಿ ಸುಮ್ಮನಾಗುತ್ತಾರೆ. ಈಗ ಆಲದ ಮರ ಹಾಡತೊಡಗುತ್ತದೆ. ‘ಆಲದ ಮರ ನಾ ಆಲದ ಮರ, ರೆಕ್ಕೆ ಮುರಿದ ಹಕ್ಕಿಗಳಿಗೆ ನೆಲೆಯ ಕೊಡುವೆನು, ನಾ ನೆಲೆಯ ಕೊಡುವೆನು’ ಎನ್ನುತ್ತಾ ತನ್ನೆರಡು ಕೈಗಳನ್ನು ಚಾಚುತ್ತದೆ. ಆಗ ಹಕ್ಕಿಗಳು ಅದರ ಕೈಯೊಳಗೆ ಸೇರಿಕೊಳ್ಳಬೇಕು. ಒಂದೆರಡು ನಿಮಿಷಗಳು ನಿಂತ ಬಳಿಕ ಎಲ್ಲಾ ಹಕ್ಕಿಗಳು ಚಿಲಿಪಿಲಿಗುಟ್ಟುತ್ತಾ ಕೈಕೈ ಹಿಡಿದು ಹಿಮ್ಮೇಳಕ್ಕೆ ತಕ್ಕ ಹಾಗೆ ಹೆಜ್ಜೆ ಹಾಕುತ್ತಾ ಆಲದ ಮರದ ಸುತ್ತಾ ಸುತ್ತಬೇಕು. ನೆಲೆ ದೊರೆತ ಖುಷಿಯಲ್ಲಿ ಮಿಂದೇಳಬೇಕು, ಹಿಗ್ಗಬೇಕು. ನಂತರ ವೇದಿಕೆಯಿಂದ ನಿರ್ಗಮಿಸಬೇಕು. ವೇಷಭೂಷಣ ಹಾವಭಾವ ನಟನೆಯಿಂದ ಹತ್ತು ಹದಿನೈದು ನಿಮಿಷಗಳ ಕಾಲ ನೋಡುಗರನ್ನು ಮಂತ್ರಮುಗ್ಧರನ್ನಾಗಿಸಿದ್ದ ನಮ್ಮ ಅವತ್ತಿನ ರೂಪಕ ಇಂದಿಗೂ ನನ್ನ ಕಣ್ಣಿಗೆ ಕಟ್ಟುತ್ತದೆ.

ಮಳೆ ನಿಂತರೂ ಹನಿ ನಿಲ್ಲುವುದಿಲ್ಲ ಎಂಬ ಮಾತಿನಂತೆ ವಾರ್ಷಿಕೋತ್ಸವ ಮುಗಿದರೂ ನಮ್ಮ ರೂಪಕವನ್ನು ಯಾರೂ ಮರೆಯಲಿಲ್ಲ. ಇತ್ತ ಚಿಕ್ಕ ಹುಡುಗಿಯೂ ಅಲ್ಲದ ಅತ್ತ ದೊಡ್ಡ ಹುಡುಗಿಯೂ ಅಲ್ಲದ ನನ್ನನ್ನು ಕಂಡೊಡನೆ ಊರುಮನೆಯವರು ‘ಏನಾ ನಾಟಕ ಬಹಳ ಚನ್ನಾಗಿ ಮಾಡಿದೆ ನೀನು’ ಅಂತ ಕೂಗಿ ಹೇಳುತ್ತಿದ್ದರು. ಮತ್ತೆ ಕೆಲವರು ಬೆನ್ನು ತಟ್ಟಿ ಮೂಗು ಹಿಡಿದು ಎಳೆಯುತ್ತಿದ್ದರು. ‘ನಾವು ಮಾಡಿದ್ದು ರೂಪಕ, ನಾಟಕವಲ್ಲ’ ಅಂತ ಹೇಳಿದರೆ ಅವರು ಅದನ್ನು ಸರಿಯಾಗಿ ಕೇಳಿಸಿಕೊಳ್ಳುತ್ತಿರಲಿಲ್ಲ. ‘ಹೌದಾ, ಅದು ರೂಪಕನಾ, ನಾಟಕನೇ ನೋಡಿದಂಗಾಯ್ತು’ ಎನ್ನುತ್ತಿದ್ದರು. ಪ್ರತಿ ವರ್ಷ ಪ್ರತೀ ನಾಟಕಕ್ಕೂ ನಮ್ಮ ಓಂಕಾರಮ್ಮ ಟೀಚರ್ ನನಗೆ ನಾಯಕನ ಪಾತ್ರ ಕೊಡುತ್ತಿದ್ದರು. ಎಷ್ಟೇ ಡ್ಯಾನ್ಸ್, ನಾಟಕ ಮಾಡಿದರೂ ಅವರುಗಳ ತಲೆಯಿಂದ ನಮ್ಮ ರೂಪಕ ಮರೆಯಾಗಲೇ ಇಲ್ಲ. ಸಾಲದೆಂಬಂತೆ ಊರಿನ ಕೆಲವು ಕಾಲೇಜು ಹುಡುಗರು ನನ್ನನ್ನು ನೋಡಿದೊಡನೆ ಆಲದ ಮರವೇ ಆಲದ ಮರವೇ ಎಂದು ಹಾಡುತ್ತಿದ್ದರು. ನಾನು ನನ್ನ ಗೆಳತಿಯರು ಆ ಹುಡುಗರಿಗೆ ಒಬ್ಬನಿಗೆ ಬೈನೆಮರ, ಇನ್ನೊಬ್ಬನಿಗೆ ಅಡಿಕೆಮರ, ಮತ್ತೊಬ್ಬನಿಗೆ ತೆಂಗಿನಮರ ಅಂತ ಹೆಸರು ಕಟ್ಟಿದೆವು. ಮಗದೊಬ್ಬ ನಮ್ಮನ್ನು ನೋಡಿ ‘ಮಳೆ ಬಂತು ಮಳೆ ಮಳೆ ಬಂತೂ ಮಳೇ’ ಎಂದು ಹಾಡಿದ. ನಾವುಗಳು ಅವನಿಗೆ ‘ಮಳೆ ಬಂತು ಮಳೆ’ ಅಂತಲೇ ಹೆಸರು ಕಟ್ಟಿದೆವು. ನಾವು ಹೆಸರು ಕಟ್ಟಿರುವ ವಿಷಯ ಅವರುಗಳಿಗೆ ಗೊತ್ತಾಗದಂತೆ ಎಚ್ಚರಿಕೆ ವಹಿಸಿದೆವು. ಇವತ್ತಿಗೂ ಅವರಿಗೆ ನಾನು, ನನಗೆ ಅವರು, ಎದುರಿಗೆ ಬಂದರೆ ಆಲದ ಮರವೇ ಆಲದ ಮರವೇ ಸಾಲೇ ನೆನಪಾಗುತ್ತದೆ.

ನಿಜ ಹೇಳಬೇಕೆಂದರೆ ಆಲ ಎಂಬ ಹೆಸರಿನ ಮರ ಇದೆ ಅಂತ ಗೊತ್ತಿತ್ತು – ಪಠ್ಯಪುಸ್ತಕದಲ್ಲಿ ಓದಿದ್ದು, ಗುರುಗಳ ಬಾಯಿಂದ ಕೇಳಿದ್ದು. ಅಷ್ಟು ಬಿಟ್ಟರೆ ನಾನದನ್ನು ನೋಡಿರಲಿಲ್ಲ. ಆಲದ ಮರ ಹೇಗಿರುತ್ತದೆ ಎಂಬ ಸಾಮಾನ್ಯ ತಿಳಿವಳಿಕೆ ಕೂಡ ನನಗಿರಲಿಲ್ಲ. ನಮ್ಮ ಊರಿನಲ್ಲಿ ಆಲದ ಮರವೇ ಇರಲಿಲ್ಲ. ಇವತ್ತಿಗೂ ಇಲ್ಲ. ನಾನು ಆಲದ ಮರವನ್ನು ನೋಡಿದ್ದು ನನ್ನ ಇಪ್ಪತ್ತನೇ ವಯಸ್ಸಿನಲ್ಲಿ, ಮೈಸೂರಿಗೆ ಟೂರ್ ಹೋದಾಗ. ದೂರದಿಂದ ನೋಡಿದ್ದು. ಎಲ್ಲಾ ಮರಗಳ ತರ ಅಲ್ಲ ಅದು, ತನ್ನ ಬಿಳಲುಗಳಿಂದ ವಿಸ್ತಾರವನ್ನು ಹೆಚ್ಚಿಸಿಕೊಂಡು ಘನ ಗಾತ್ರದಿಂದ ವಿಜೃಂಭಿಸುವ ಗಂಭೀರ ಮರದಂತೆ ನನ್ನ ಕಣ್ಣಿಗೆ ಕಂಡಿತು. ರೆಕ್ಕೆ ಮುರಿದುಕೊಂಡ ಹಕ್ಕಿಗಳು ಏಕೆ ಆಲದ ಮರವನ್ನು ಆಶ್ರಯ ಕೇಳಿಕೊಂಡು ಹೋದವು ಎಂಬ ಸತ್ಯ ನನಗೀಗ ಅರಿವಾಯಿತು. ನಾನು ಅಭಿನಯಿಸಿದ ರೂಪಕ ನೆನಪಾಗಿ ಕ್ಷಣ ಹೊತ್ತು ಭಾವುಕಳಾದೆ.

ಪದವಿ ಮುಗಿದು ಮುಂದಿನ ವಿದ್ಯಾಭ್ಯಾಸಕ್ಕಾಗಿ ಮೈಸೂರಿಗೆ ಹೋಗಬೇಕಾಯಿತು. ಅಲ್ಲಿ ಎರಡು ವರ್ಷವಿದ್ದರೂ ಅಷ್ಟಾಗಿ ಹೊರಗಡೆ ತಿರುಗಾಡಲಿಲ್ಲ. ನಾನು ಓದುತ್ತಿದ್ದ ಕಾಲೇಜಿನಲ್ಲಿ ಸೆಮಿನಾರ್‌ಗಳು, ಸಭೆ ಸಮಾರಂಭಗಳು, ಪರಿಸರ ಸಂಬಂಧಿ ಗೋಷ್ಠಿ ಇತರೆ ಕಾರ್ಯಕ್ರಮಗಳು ನಡೆಯುತ್ತಿದ್ದವು. ಆಗಮಿಸುತ್ತಿದ್ದ ಗಣ್ಯ ವ್ಯಕ್ತಿಗಳು ಬೇರೆ ಬೇರೆ ವಿಷಯ ಅಂದರೆ ಗಿಡ–ಮರ, ಪಶು–ಪಕ್ಷಿ, ನೆಲ–ಜಲ, ಪರಿಸರ ಸಂರಕ್ಷಣೆ ಎಲ್ಲದರ ಕುರಿತು ಮಾತನಾಡುತ್ತಿದ್ದರು. ಆದರೆ ಆಲದ ಮರದ ಸುದ್ದಿಗೆ ಹೋಗುತ್ತಿರಲಿಲ್ಲ. ಏನಾದರೂ ಹೇಳುತ್ತಾರೋ ಎಂದು ಬಾಯಿ ಕಿವಿ ಕಣ್ಣು ತೆರೆದು ಕುಳಿತಿರುತ್ತಿದ್ದ ನನಗೆ ನಿರಾಸೆಯಾಗುತ್ತಿತ್ತು. ಈ ನಡುವೆ ಊರಿಗೆ ಬರುವಾಗ ಹೋಗುವಾಗ ಆಲದ ಮರಗಳು ದೂರದಿಂದ ಕಾಣುತ್ತಿದ್ದವು. ನೋಡಿದ ಕೂಡಲೇ ರೂಪಕದ ಹಾಡು ನೆನಪಾಗುವುದರ ಜೊತೆಗೆ ಆಲದ ಮರವನ್ನು ಹತ್ತಿರದಿಂದ ನೋಡಬೇಕು, ಅದರ ಬುಡದಲ್ಲಿ ತುಂಬಾ ಹೊತ್ತು ಕುಳಿತು ಆಲದ ಮರವೇ ಆಲದ ಮರವೇ ಅಂತ ಹಾಡಬೇಕು ಅನ್ನಿಸುತ್ತಿತ್ತು. ಅಂತ ಸಂದರ್ಭ ಒದಗಿ ಬರಲೇ ಇಲ್ಲ. ನೆಂಟರಿಷ್ಟರ ಮನೆ ಮದುವೆ ಮುಂಜಿ ಅಂತ ಅಲ್ಲಿ ಇಲ್ಲಿ ಹೋದಾಗಲೂ ಆಲದ ಮರ ನನ್ನ ಕಣ್ಣಿಗೆ ಬೀಳಲಿಲ್ಲ. ಕೆಲವರೆಲ್ಲಾ ‘ಇಲ್ಲೇ ಇತ್ತಲ್ಲ ಅಲ್ಲೆ ಇತ್ತಲ್ಲ, ಅಲ್ಲೊಂದು ದೇವಸ್ಥಾನ ಇತ್ತಲ್ಲ, ಅದರ ಪಕ್ಕದಲ್ಲೇ ಇತ್ತಲ್ಲ, ವಟವೃಕ್ಷ ಅಂತ ಅಲ್ಲೇ ಬರೆದಿತ್ತಲ್ಲ, ನೋಡಲಿಲ್ಲವಾ?’ ಅಂತ ಕೇಳುತ್ತಿದ್ದರು. ನಾನೇನಾದ್ರೂ ಕಣ್ಣು ಮುಚ್ಚಿಕೊಂಡು ತಿರುಗಾಡುತ್ತಿದ್ದೇನಾ? ಎಲ್ಲರಿಗೂ ಕಂಡ ಮರ ನನಗೇಕೆ ಕಾಣುತ್ತಿಲ್ಲ ಅಂತ ಯೋಚಿಸುತ್ತಿದ್ದೆ. ಕೂತಲ್ಲಿ ನಿಂತಲ್ಲಿ